o.s. 183/24
Dt:17.03.2026

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ದಿಃ 17.03.2026.

ಅಸಲು ದಾವಾ ನಂ. 183/2024

ಪಿ.ಡಬ್ಲೂ-1

(ಪಾಟೀ ಸವಾಲುಃ ಶ್ರೀ ಡಿ. ಆರ್. ವಕೀಲರಿಂದ ಪ್ರತಿವಾದಿಯರ ಪರವಾಗಿ)

ನನಗೆ ಇಬ್ಬರು ಮಕ್ಕಳು. ಅವರುಗಳ ಹೆಸರುಗಳೆಂದರೆ ಚಂದ್ರಮತಿ ಮತ್ತು ರಶ್ಮಿ. ಸದರಿ ನನ್ನ ಮಕ್ಕಳನ್ನು ಸದರಿ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ನನ್ನ ಮಕ್ಕಳಿಗೆ ವಿವಾಹವಾಗಿದೆ. ನಾನು ಒಬ್ಬಳೆ ಮಲ್ಲಿ ಪಟ್ಟಣ ಹೋಬಳಿ ಆಲದಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನಗೆ ಆಲದಹಳ್ಳಿಯಲ್ಲಿ ಸ್ವಂತ ಮನೆ ಇದೆ ಸರಿ. ಸದರಿ ಮನೆಯನ್ನು ನನ್ನ ತಂದೆಯವರು ಕಟ್ಟಿಸಿಕೊಟ್ಟಿರುತ್ತಾರೆ. ಆಲದಹಳ್ಳಿಯಲ್ಲಿ ನಾನು ವ್ಯವಸಾಯ ಮಾಡಿ ಜೀವನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಮಾಡುತ್ತಿದ್ದೇನೆ. ಸದರಿ ಆಲದಹಳ್ಳಿಯಲ್ಲಿ ಇರುವ ಮನೆಗೆ ದಾಖಲಾತಿಗಳನ್ನು ನಾನು ನ್ಯಾ ಕ್ಕೆ ಹಾಜರುಪಡಿಸಲಾಗಿದೆಯೇ ಎಂದರೆ ಇಲ್ಲ. ಸದರಿ ಮನೆಗೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾ ಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ನನ್ನನ್ನು ಆಲದಹಳ್ಳಿಯಿಂದ ಬೆಳ್ಳಾಮೆಗೆ ವಿವಾಹಮಾಡಿಕೊಟ್ಟಿರುತ್ತಾರೆ. ಬೆಳ್ಳಾಮೆಯಲ್ಲಿ ನನ್ನ ಮಾವನಿಗೆ 4 ಎಕರೆ ಜಮೀನು ಇತ್ತು. ಬೇರೆ ಜಮೀನಿನ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ವಿವಾಹದ ಕಾಲದಲ್ಲಿ ನನ್ನ ಮಾವ ಹನುಮೇಗೌಡರವರು ಬದುಕಿರಲಿಲ್ಲ. ನನ್ನ ಮಾವನಿಗೆ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ಮೊದಲನೇ ಹೆಂಡತಿ ಗೌರಮ್ಮ , 2ನೇ ಹೆಂಡತಿ ಲಕ್ಷ್ಮಮ್ಮ ಎಂದರೆ ಸಾಕ್ಷಿಯು ನನಗೆ ತಿಳಿದಿರುವುದು ಲಕ್ಷ್ಮಮ್ಮ ಒಬ್ಬರೇ. ನನ್ನ ಮಾವನಿಗೆ ಹಿರಿಯ ಹೆಂಡತಿ ಇರುವ ವಿಚಾರ ನನ್ನ ಪತಿ ನನಗೆ ಹೇಳಿರುವುದಿಲ್ಲ ಎಂದರೆ ಸರಿ. ಹಿರಿಯ ಹೆಂಡತಿಗೆ ಕೃಷ್ಣೇಗೌಡರು ಎಂಬ ಮಗ ಇದ್ದ ಎಂದರೆ ನನಗೆ ಗೊತ್ತಿಲ್ಲ. ಕೃಷ್ಣೇಗೌಡರು ಗೊತ್ತು. ನಮ್ಮ ವಿವಾಹದ ನಂತರ ಕೃಷ್ಣೇಗೌಡರು ಮೃತರಾಗಿರುತ್ತಾರೆ. ಕೃಷ್ಣೇಗೌಡರಿಗೆ ಹೆಂಡತಿ ಮಕ್ಕಳು ಇದ್ದಾರೆ ಎಂದರೆ ಹೆಂಡತಿ ಮೃತರಾಗಿದ್ದಾರೆ. ಮಕ್ಕಳು ಇದ್ದಾರೆ. ನಮ್ಮ ಮಾವ ಹನುಮೇಗೌಡರ ಹೆಂಡತಿ ಲಕ್ಷ್ಮಮ್ಮ ನಿಗೆ 3 ಜನ ಮಕ್ಕಳು. ನಾನು ವಿವಾಹದ ನಂತರ ಬೆಳ್ಳಾಮೆಯಲ್ಲಿ 5-6 ವರ್ಷ ವಾಸವಾಗಿದ್ದೆನು. ಸದರಿ ಸಮಯದಲ್ಲಿ ನಾನು ಬೆಳ್ಳಾಮೆಯಲ್ಲಿ ವ್ಯವಸಾಯ ಮಾಡಲು ಜಮೀನಿಗೆ ಹೋಗುತ್ತಿದ್ದೆ ಎಂದರೆ ಸರಿ. ಬೆಳ್ಳಾಮೆಯಲ್ಲಿ 4 ಕಡೆ ಜಮೀನು ಇದೆ. 4 ಕಡೆ ಜಮೀನು ಇದ್ದು, 4 ಕಡೆ ಜಮೀನಿಗೂ ಪ್ರತ್ಯೇಕ ಸರ್ವೆ ನಂಬರ್ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮುಂದುವರಿದ  ಪಾಟಿ ಸವಾಲಿಗಾಗಿ  ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ  ಬೆರಳಚ್ಚು ನೀಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ ಸುಮ ಟಿ .)

2ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ಅರಕಲಗೂಡು